ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಬರೀ ನಾಲ್ಕು ಮಾತಿನಲ್ಲಿ ಪುಟ್ನಂಜಿ-ಬಾಯಿ ತುಂಬಾ ಅಪರಂಜಿ-ಎಂದು ಆಗಿಬಿಟ್ಟರೆ ಆಗುವುದಿಲ್ಲ. ಸರಿಯಾಗಿ ಹೇಳಬೇಕು. ಹೇಳುವಾಗ ಕುವೆಂಪು ಅವರ ಬಗ್ಗೆ ಕಠಿಣವಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ನಿರ್ದಾಕ್ಷಿಣ್ಯವಾದ ಉತ್ತರ ಬರಬೇಕು ಇಲ್ಲಿ.....

ಬೆಳಗಾವಿ ಪ್ರವಾಸಿ ಮಂದಿರ/ ಸರ್ಕೀಟ್ ಹೌಸಿಗೆ ವಿದ್ಯುತ್ ಪೂರೈಕೆ

378- ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಪ್ರವಾಸಿ ಮಂದಿರ ಸರ್ಕೀಟ್ ಹೌಸ್‌ಗಳ ಕೊಠಡಿಗಳ ಸಂಖ್ಯೆ ಎಷ್ಟು?

ಆ) ಸದರಿ ಪ್ರವಾಸಿ ಮಂದಿರದಲ್ಲಿ ಕೊಠಡಿಗಳ ಸುಣ್ಣ ಬಣ್ಣ ಬಳಿಯದೇ ವಿದ್ಯುತ್ ಉಪಕರಣಗಳ ಜೋಡಣೆ ಸರಿಯಾಗಿಲ್ಲದೇ ಕೆಟ್ಟು ಹೋಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಪ್ರವಾಸಿ ಮಂದಿರದ ಕೊಠಡಿಗಳ ಅತಿಥಿಗಳಿಗೆ ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ನೀರು ಪೂರೈಕೆ ಇಲ್ಲದೇ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರದ ಈ ಬಗ್ಗೆ ಕೂಡಲೇ ಕ್ರಮಗಳನ್ನು ಕೈಗೊಳ್ಳುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಪ್ರವಾಸಿ ಮಂದಿರದಲ್ಲಿ ಹತ್ತು : ಸರ್ಕೀಟ್ ಹೌಸ್‌ನಲ್ಲಿ ಒಂಭತ್ತು ಕೊಠಡಿಗಳಿವೆ.

ಆ) ಹೌದು. ಆದರೂ ಸಹ ಲಭ್ಯವಿರುವ ಅನುದಾನದಲ್ಲಿ ದುರಸ್ಥಿ ಮಾಡಲಾಗಿದೆ.

ಇ) ಕಳೆದ ವರ್ಷದಲ್ಲಿ ಸಾಕಷ್ಟು ಮಳೆ ಬಾರದಿದ್ದ ಏಪ್ರಿಲ್ 98 ರಿಂದ ಮೂರು ದಿನಗಳಿಗೊಮ್ಮೆ ಪ್ರವಾಸಿ ಮಂದಿರ : ಸರ್ಕೀಟ್ ಹೌಸ್‌ಗಳಿಗೆ ನೀರು ಸರಬರಾಜು ಆಗುತ್ತಿದೆ.

ಈ) ಎರಡು ಕೊಳವೇ ಬಾವಿಗಳನ್ನು ಕೊರೆಯಲಾಗಿದೆ. ಅವಶ್ಯಕವಿದ್ದಲ್ಲಿ ಟ್ಯಾಂಕರ್‌ಗಳಿಂದ ನೀರು ಪಡೆಯಲಾಗುತ್ತಿದೆ.

ಶ್ರೀ ಹೆಚ್.ಡಿ. ಬಸವರಾಜು : ಸಭಾಧ್ಯಕ್ಷರೇ, ಬೆಳಗಾವಿ ಪ್ರವಾಸಿ ಮಂದಿರದ ಬಗ್ಗೆ ಪ್ರಶ್ನೆ ಕೇಳಿದ್ದೆ. ಅಲ್ಲಿ ಸುಣ್ಣಬಣ್ಣ ಬಳಿಯದೇ ವಿದ್ಯುತ್ ಉಪಕರಣಗಳ ಜೋಡಣೆ ಸರಿಯಾಗಿಲ್ಲದೆ ಕೆಟ್ಟುಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಕೇಳಿದ್ದಕ್ಕೆ ಅವರು ಕೊಟ್ಟಿರುವ ಉತ್ತರದಲ್ಲಿ 'ಲಭ್ಯವಿರುವ ಅನುದಾನದಲ್ಲಿ ದುರಸ್ತಿ ಮಾಡಲಾಗಿದೆ' ಎಂದು ಹೇಳಿದ್ದಾರೆ. ನಾನು ಒಂದೇ ಒಂದು ನಿರ್ದಿಷ್ಟವಾದಂಥ ಪ್ರಶ್ನೆಯನ್ನು ಕೇಳುತ್ತೇನೆ. ಸುಣ್ಣ, ಬಣ್ಣ ಮತ್ತು ಏನೇನು

ಪ್ರಶ್ನೆಯಲ್ಲಿ ಕೇಳಿದ್ದೇನೆ, ಅಷ್ಟೂ ಕೆಲಸವನ್ನು ಸಮರ್ಪಕವಾಗಿ ಮಾಡುತ್ತೀರಾ? ಯಾವಾಗ ಮಾಡುತ್ತೀರಿ? ಅದರ ಬಗ್ಗೆ ಹೇಳಿದರೆ ಸಾಕು.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಸುಣ್ಣ, ಬಣ್ಣ ಹಚ್ಚುವಂಥ ಕೆಲಸ ಈಗಾಗಲೇ ಪ್ರಾರಂಭ ಮಾಡಿದೆ. ಶೀಘ್ರದಲ್ಲೇ ಮುಗಿಸುತ್ತಾರೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು : ರಾಜ್ಯದಲ್ಲಿ ಒಟ್ಟು ಎಷ್ಟು ಪ್ರವಾಸಿ ಮಂದಿರಗಳು ಮತ್ತು ಸರ್ಕ್ಯುಟ್ ಹೌಸ್‌ಗಳು ಇವೆ? ಕಳೆದ ವರ್ಷ ದುರಸ್ತಿ ನವೀಕರಣಕ್ಕಾಗಿ ಎಷ್ಟು ಹಣವನ್ನು ತಾವು ವೆಚ್ಚ ಮಾಡಿದ್ದೀರಿ? ಈ ವರ್ಷ ಎಷ್ಟು ಹಣ ವೆಚ್ಚ ಮಾಡುತ್ತೀರಿ ಎಂದು ಇದರ ಬಗ್ಗೆ ನಿಖರವಾಗಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಜನರಲ್ ಕೊಶ್ಚನ್ ಕೇಳಿ ಆಮೇಲೆ ಸ್ಪೆಸಿಫಿಕ್ ಆಗಿ ಕೇಳಿದರೆ ಪರವಾಗಿಲ್ಲ. ನೀವು ಮೊದಲು ಬೆಳಗಾಮ್‌ನದ್ದು ಕೇಳಿಬಿಟ್ಟು ಈಗ ರಾಜ್ಯದ್ದೆಲ್ಲಾ ಕೇಳುತ್ತಿದ್ದೀರಿ. ಅವರ ಹತ್ತಿರ ಡಿಟೇಲ್ಸ್ ಎಲ್ಲಿ ಇರುತ್ತದೆ?

ಶ್ರೀ ಎಂ. ಸಿ. ಉದಾಸಿ : ಮಾಹಿತಿಯನ್ನು ತರಿಸಿ ಕೊಡಲಾಗುವುದು.

ಬಾರ್ ಅಸೋಷಿಯೇಷನ್ ಅಭಿವೃದ್ಧಿಪಡಿಸುವ ಕುರಿತು

379- ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಕಾನೂನು, ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಎಷ್ಟು ಬಾರ್ ಅಸೋಸಿಯೇಷನ್‌ಗಳಿವೆ?*

ಆ) *ವಕೀಲರ ಗುಣಮಟ್ಟವನ್ನು ಕಾಪಾಡಲು ಈ ಬಾರ್ ಅಸೋಸಿಯೇಷನ್‌ಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮಗಳೇನು?*

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಸಚಿವರು) :

ಅ) 160 ಬಾರ್ ಅಸೋಸಿಯೇಷನ್‌ಗಳಿವೆ.

ಆ) ಬಾರ್ ಅಸೋಸಿಯೇಷನ್‌ಗಳನ್ನು ಹಾಗೂ ವಕೀಲರುಗಳ ವಕೀಲಿ ವೃತ್ತಿಯ ಗುಣಮಟ್ಟ ಅಭಿವೃದ್ಧಿ ಪಡಿಸಲು ಈ ಕೆಳಕಂಡ ಯೋಜನೆಗಳನ್ನು ಸರ್ಕಾರವು ರೂಪಿಸಿದೆ.

1. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಬಾರ್ ಅಸೋಸಿಯೇಷನ್‌ಗಳು ಸೆಮಿನಾರ್ ಮತ್ತು ಕಾರ್ಯಾಗಾರಗಳನ್ನು ನಡೆಸಲಾಗುತ್ತದೆ.

2. ವಕೀಲರುಗಳ ಸಂಘಗಳಿಗೆ ವೃತ್ತಿಗೆ ಸಂಬಂಧಪಟ್ಟ ಪುಸ್ತಕ ಹಾಗೂ ಪೀಠೋಪಕರಣಗಳನ್ನು